ಪರಿಶಿಷ್ಟ ಜಾತಿ/ಪಂಗಡ ಜನಾಂಗದವರಿಗೆ ಕೊಳವೆ ಬಾವಿ

3307 (3631); ಶ್ರೀ ಸೋಮಶೇಖರ್ ಎಸ್.ಟಿ. (ಯಶವಂತಪುರ)

ಅ) 2013–14, 2014–15ನೇ ಸಾಲಿನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಕೊರೆಯುವ ಯೋಜನೆಯಡಿ ಸಹಾಯ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಇಲಾಖೆ ವತಿಯಿಂದ ನಿಗದಿಪಡಿಸಿದ್ದ ಗುರಿ ಎಷ್ಟು; ಎಷ್ಟು ಕೊಳವೆ ಬಾವಿಗಳನ್ನ ಕೊರೆಯಲಾಗಿದೆ; ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಬಾಕಿ ಉಳಿಯಲು ಕಾರಣವೇನು;

ಇ) ಇದಕ್ಕಾಗಿ ಒದಗಿಸಿದ್ದ ಅನುದಾನ ಎಷ್ಟು; ಈ ಅನುದಾನವನ್ನು ಈ ಜನಾಂಗದ ಇತರೆ ಯೋಜನೆಯಡಿ ವೆಚ್ಚ ಮಾಡಲು ಕ್ರಮ ಕೈಗೊಂಡಿದೆಯೇ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) **ಮತ್ತು** ಆ) 2013–14, 2014–15ನೇ ಸಾಲಿನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ನಿಗಧಿಪಡಿಸಿದ ಗುರಿ.

ವಿವರ	ನಿಗಧಿಪಡಿಸಿದ ಗುರಿ
ಪರಿಶಿಷ್ಟ ಜಾತಿ	61
ಪರಿಶಿಷ್ಟ ಪಂಗಡ	11

ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ: 06 ಅರ್ಜಿದಾರರು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರುತ್ತಾರೆ. ಕೊಳವೆಬಾವಿಗಳನ್ನು ಕೊರೆಯಲು ಕರ್ನಾಟಕ ಅಂತರ್ಜಾಲ ಪ್ರಾಧಿಕಾರದಿಂದ ದಿನಾಂಕ:16.02.2015ರಲ್ಲಿ ಅನುಮತಿ ದೊರೆಕಿದೆ. ಕೊಳವೆಬಾವಿಗಳನ್ನು ಕೊರೆಯಲು ಆಹ್ವಾನಿಸಿದ ಟೆಂಡರ್ ಪ್ರಕ್ರಿಯೆಯಲ್ಲಿ ಯಾವ ಗುತ್ತಿಗೆದಾರರೂ ಭಾಗವಹಿಸಿಲ್ಲದ ಕಾರಣ, ರಾಮನಗರ ಜಿಲ್ಲೆಗೆ ನಿಗದಿಯಾಗಿರುವ ದರದಲ್ಲೇ ಬೆಂಗಳೂರು ನಗರ ಜಿಲ್ಲೆಯಲ್ಲಿ ಕೊಳವೆಬಾವಿಗಳನ್ನು ಕೊರೆಯಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. ಪ್ರಸ್ತುತ ಆಯ್ಕೆಯಾಗಿರುವ 06 ಫಲಾಪೇಕ್ಷಿಗಳಿಗೆ ಕೊಳವೆಬಾವಿ ಕೊರೆಯಿಸಲು ಕ್ರಮಜರುಗಿಸಲಾಗುತ್ತಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಈ ಕ್ಷೇತ್ರವು ನಗರ ಸಭಾ ವ್ಯಾಪ್ತಿಗೆ ಬರುವ ಪ್ರಯುಕ್ತ ಫಲಾಪೇಕ್ಷಿಗಳಿಂದ ಕೊಳವೆ ಬಾವಿ ಸೌಲಭ್ಯ ಕೋರಿ ಅರ್ಜಿಗಳು ಬಾರದೇ ಇರುವುದರಿಂದ ಯಾವುದೇ ಕೊಳವೆ ಬಾವಿಗಳನ್ನು ಕೊರೆದಿರುವುದಿಲ್ಲ.

ಇ) **ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ:** 2013–14ನೇ ಸಾಲಿನಲ್ಲಿ ₹. 12.00 ಲಕ್ಷ ಹಾಗೂ 2014–15ನೇ ಸಾಲಿನಲ್ಲಿ 79.50 ಲಕ್ಷ ಅನುಧಾನ ನಿಗದಿಪಡಿಸಿದ್ದು ಈ ಲೆಕ್ಕ ಶಿರ್ಷಿಕೆಯಡಿ ಒದಗಿಸಿದ ಅನುದಾನವು ಈ ಯೋಜನೆಗೆ ಮಾತ್ರ ಸೀಮಿತವಾಗಿರುವುದರಿಂದ ಇತರೆ ಯೋಜನೆಗಳಿಗೆ ವೆಚ್ಚ ಮಾಡಿರುವುದಿಲ್ಲ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಸೌಲಭ್ಯಕ್ಕಾಗಿ ಸದರಿ ಕ್ಷೇತ್ರದಲ್ಲಿ ಬೇಡಿಕೆ ಇಲ್ಲದೇ ಇರುವುದರಿಂದ ಕ್ಷೇತ್ರದಲ್ಲಿ ಕೊಳವೆ ಬಾವಿಗಳನ್ನು ಕೊರೆದಿರುವುದಿಲ್ಲ. ಆದಾಗ್ಯೂ ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿನ ವಿಧಾನ ಸಭಾ

ಕ್ಷೇತ್ರಗಳಿಗೆ ಇತರೆ ಯೋಜನೆಗಳಡಿ ಹೆಚ್ಚಿನ ಗುರಿ ನೀಡಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಬಸ್ ನಿಲ್ದಾಣ ಕಾಮಗಾರಿ

3308 (3633); ಶ್ರೀ ಸೋಮಶೇಖರ್ ಎಸ್.ಟಿ. (ಯಶವಂತಪುರ)

ಅ) ಕೆಂಗೇರಿ ಉಪನಗರದ ಬಸ್ ನಿಲ್ದಾಣ ಕಾಮಗಾರಿಯು ನಿಧಾನ ಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನಿಲ್ದಾಣ ಕಾಮಗಾರಿಯನ್ನು ಯಾವ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ; ಇದರ ಅಂದಾಜು ವೆಚ್ಚವೆಷ್ಟು;

ಇ) ಈ ನಿಲ್ದಾಣ ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ ಏನು;

ಈ) ಸಾರ್ವಜನಿಕರಿಗೆ ಈ ನಿಲ್ದಾಣದಲ್ಲಿ ಬಸ್ ಸೌಲಭ್ಯವನ್ನು ಯಾವಾಗ ಕಲ್ಪಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹೌದು.

ಆ) ಸದರಿ ಬಸ್ ನಿಲ್ದಾಣದ ಕಾಮಗಾರಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಆಂತರಿಕ ಸಂಪನ್ಮೂಲಗಳಿಂದ ಕೈಗೊಳ್ಳಲಾಗುತ್ತಿದೆ. ಇದರ ಅಂದಾಜು ವೆಚ್ಚ ₹. 868.86 ಲಕ್ಷಗಳು.

ಇ) ಈ ಕಾಮಗಾರಿಗೆ ದಿನಾಂಕ: 01–08–2013 ರಂದು ಲೈನ್‌ಔಟ್ ನೀಡಲಾಗಿರುತ್ತದೆ. ನಿಗಧಿತ ಕಾಲಾವಧಿಯಂತೆ ಆಗಸ್ಟ್ 2014 ರಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. 2013–14 ನೇ ಸಾಲಿನಲ್ಲಿ ಮಳೆಗಾಲ ನವೆಂಬರ್ ಅಂತ್ಯದ ವರೆಗೆ ಮುಂದುವರೆದಿದ್ದರಿಂದ ಸದರಿ ಸಾಲಿನಲ್ಲಿ ನಿಗಧಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದ ಕಾರಣ ಯೋಜನೆಯನ್ನು ಪೂರ್ಣಗೊಳಿಸುವ ದಿನಾಂಕವನ್ನು ಎಪ್ರಿಲ್ 2015ಗೆ